[Govt. of Karnataka C.R.P. 67]

| Deposition Sheets (RP.No.57) Form No.4 (Civil) | IN THE COURT OF CIVIL JUDGE & J.M.F.C., KARKALA.<br><br>**Criminal Case No. 454/2024**<br><br>..................................................Vs.................................... |
|---|---|

ಸಾಕ್ಷಿದಾರಳ ಹೆಸರು ಃ ಡಾ. ಸೌಜನ್ಯ ಪಿ.ಡಬ್ಲ್ಯೂಃ 9

ಗಂಡನ ಹೆಸರುಃ ಡಾ. ರಾಘವೇಂದ್ರ ಸಿ.ಡಬ್ಲ್ಯೂಃ 10

ಪ್ರಾಯ ಃ 32 ವರ್ಷ

ಉದ್ಯೋಗ ಃ ಮಕ್ಕಳ ತಜ್ಞರು

ವಾಸ ಃ ಕಾರ್ಕಳ

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು. ದಿಃ 23-02-2026

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

ನಾನು ಜೂನ್ 2021 ರಿಂದ ಕಾರ್ಕಳ ಸರಕಾರಿ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 10-01-2024 ರಂದು ಚಾಸಾ-1 ರವರು ರಾತ್ರಿ 9.40 ಗಂಟೆಗೆ ಹಲ್ಲೆಯ ಕಾರಣದಿಂದಾಗಿ ಚಾಸಾ-2 ರವರ ಜೊತೆ ಚಿಕಿತ್ಸೆಗೆ ಬಂದಿರುತ್ತಾರೆ ಹಾಗೂ ಅದೇ ದಿನ ರಾತ್ರಿ 8.30 ಗಂಟೆಗೆ ಸಂಬಂಧಿಕರಿಂದ ಹಲ್ಲೆಯಾಗಿರುವುದಾಗಿ ತಿಳಿಸಿರುತ್ತಾರೆ. ಅವರನ್ನು ಪರೀಕ್ಷಿಸಿದಾಗ ಬಲಕೈಯ ಮಧ್ಯದ ಬೆರಳಿನಲ್ಲಿ ಕಚ್ಚಿದ ಗಾಯ ಕಂಡುಬಂದಿರುತ್ತದೆ. ಸದ್ರಿ ಗಾಯ ಸಾದಾ ಸ್ವರೂಪದ ಗಾಯವಾಗಿರುತ್ತವೆ.

ಸದರಿ ಗಾಯವನ್ನು ಪರೀಕ್ಷಿಸಿ ಗಾಯದ ಪ್ರಮಾಣಪತ್ರ ನೀಡಿರುತ್ತೇನೆ.

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದ್ರಿ ದಾಖಲೆಯು ಈ ಮೇಲೆ ಹೇಳಿದಂತೆ ಪರೀಕ್ಷಿಸಿ ನೀಡಿದ ಗಾಯದ ಪ್ರಮಾಣಪತ್ರ. ಸದ್ರಿ ಗಾಯದ

ಪ್ರಮಾಣಪತ್ರವನ್ನು ನಿಪಿ-11 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರಃ ಶ್ರೀಮತಿ ಐ.ಎಸ್.ಕೆ. ವಕೀಲರಿಂದಃ

ನಿಪಿ-11 ರಲ್ಲಿ ಕಾಣಿಸಿರುವ ಬರಹಗಳನ್ನು ದಿಃ 19-01-2024 ರಂದು ನಾನೇ ಬರೆದಿರುತ್ತೇನೆ. ಚಾಸಾ-1 ರವರು ಎಷ್ಟು ಜನ ಮತ್ತು ಯಾವ ವ್ಯಕ್ತಿಗಳು ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುವುದಿಲ್ಲ. ಆ ಕಾರಣಕ್ಕಾಗಿ ನಿಪಿ-11 ರಲ್ಲಿ ಯಾರು ಹಲ್ಲೆ ಮಾಡಿರುತ್ತಾರೆ ಎಂದು ಕಾಣಿಸಿರುವುದಿಲ್ಲ. ಚಾಸಾ-1 ರವರು ನಮ್ಮ ಆಸ್ಪತ್ರೆಗೆ ಬರುವ ಪೂರ್ವದಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದುಕೊಂಡಿರುವುದಿಲ್ಲ. ಅವರ ಗಾಯದಿಂದ ಸ್ವಲ್ಪ ರಕ್ತ ಬರುತ್ತಿದ್ದು, ಬ್ಯಾಂಡೇಜ್ ಮಾಡಿರುವುದಿಲ್ಲ. ಚಾಸಾ-1 ರವರು ಯಾವ ಸ್ಥಳದಲ್ಲಿ ತನಗೆ ಹಲ್ಲೆ ಆಗಿರುತ್ತದೆ, ಯಾರು ಹಲ್ಲೆ ಮಾಡಿರುತ್ತಾರೆ ಎಂದು ತಿಳಿಸಿರುವುದಿಲ್ಲ. ಚಾಸಾ-1 ರವರಿಗೆ ಮನುಷ್ಯ ಅಥವಾ ಪ್ರಾಣಿಯಿಂದ ಕಚ್ಚಿದ ಗಾಯಗಳು ಆಗಿರುತ್ತದಾ ಎಂದು ನಿಖರವಾಗಿ ಹೇಳಲಾಗುವುದಿಲ್ಲ. ಕಚ್ಚಿದ ಗಾಯವಾದರೆ ಹಲ್ಲಿನ ಗುರುತು ಬೀಳುತ್ತದೆ. ಚಾಸಾ-1 ರವರ ಕೈಯಲ್ಲಿ ಹಲ್ಲಿನ ಗುರುತು ಇತ್ತು. ಚಾಸಾ-1 ರವರ ಕೈಯಲ್ಲಿ Front or Canile ಹಲ್ಲುಗಳ ಗುರುತು ಇತ್ತಾ ಎಂದು ಹೇಳಲು ಬರುವುದಿಲ್ಲ. ಚಾಸಾ-1 ರವರ ಕೈಯಲ್ಲಿ ಎರಡೂ ಬದಿಯ ಹಲ್ಲುಗಳ ಕಚ್ಚಿದ ಗುರುತು ಇತ್ತಾ ಎಂದರೆ ಒಂದೇ ಬದಿಯ ಹಲ್ಲಿನ ಗುರುತು ಇತ್ತು. ಕಚ್ಚಿದ ಗಾಯದ ಉದ್ದ ಹೇಳಲು ಬರುತ್ತದಾ ಎಂದರೆ ಇಲ್ಲ. ಅದನ್ನು ನಿಪಿ-11 ರಲ್ಲಿ ಕಾಣಿಸಿರುವುದಿಲ್ಲ. ಕಚ್ಚಿದ ಗಾಯದ ಎಕ್ಸ್ ರೇ ತೆಗೆದಿರುವುದಿಲ್ಲ. ಚಾಸಾ-1 ರವರು ಹೊರರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾರೆ. ಚಾಸಾ-1 ರವರು ಚಿಕಿತ್ಸೆ ಪಡೆದ ನಂತರ ಪೋಲಿಸರಿಗೆ ಪ್ರಕರಣದ ಬಗ್ಗೆ ಇಂಟಿಮೇಶನ್ ಕೊಟ್ಟಿರುತ್ತೇನೆ. ಯಾವುದಾದರು ಚೂಪಾದ ವಸ್ತುವಿನ ಮೇಲೆ ಬೆರಳು ತಾಗಿದರೆ ಮೇಲೆ ಹೇಳುವ ಗಾಯ ಆಗುವ ಸಂಭವ ಇರುತ್ತದೆ ಎಂದರೆ ಸರಿಯಲ್ಲ. ಬೆಕ್ಕು ಅಥವಾ ನಾಯಿ ಕಚ್ಚಿದಾಗ ಮೇಲೆ ಹೇಳಿದ ಗಾಯ ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ನಿಪಿ-11 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಚಾಸಾ-1 ರವರಿಗೆ ಚಿಕಿತ್ಸೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಕೋರಿಕೆಯ ಮೇರೆಗೆ ಗಾಯದ ಪ್ರಮಾಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ